# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 189 | Pages. 2 | Date: 05-06-2025, THURSDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 189 - ಪುಟಗಳು : 2 - 05 ಜೂನ್ 2025 ಗುರುವಾರ Ph: 8762954248 ದರ : ₹1


# ಸೂತಕ ತಂದ ಸತ್ಕಾರ ಸಂಭ್ರಮ

## ಐಪಿಎಲ್ ತಾರೆಗಳ ವೀಕ್ಷಣೆ ತಂದ ಆಪತ್ತು | ಭದ್ರತಾ ವೈಫಲ್ಯ ಎಂದ ವಿಪಕ್ಷ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೆಂಗಳೂರು: ಸತತ 18 ವರ್ಷಗಳ ನಂತರ ಚೊಚ್ಚಲ ಟ್ರೋಫಿ ಮುಡಿಗೇರಿಸಿಕೊಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಂಭ್ರಮಾಚರಣೆ ವೇಳೆ ಬುಧವಾರ ಸಂಭವಿಸಿದ ಕಾಲ್ತುಳಿದಲ್ಲಿ 11 ಅಭಿಮಾನಿಗಳು ಮೃತಪಟ್ಟಿದ್ದಾರೆ.

ಟ್ರೋಫಿ ಗೆದ್ದ ತಂಡವನ್ನು ಕಣ್ತುಂಬಿಕೊಳ್ಳಲು ನಗರದ ವಿವಿಧೆಡೆಯಿಂದ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದ ಯುವಕ, ಯುವತಿಯರು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಈ ವೇಳೆ ಉಂಟಾದ ತಳ್ಳಾಟ, ನೂಕುನುಗ್ಗಲಿನಿಂದ ಗಂಭೀರವಾಗಿ ಅಸ್ವಸ್ಥಗೊಂಡಿದ್ದ ಓರ್ವ ಮಗು, ಆರು ಪುರುಷರು, ಮೂರು ಮಹಿಳೆಯರು ಸೇರಿ 11 ಜನರು ಮೃತಪಟ್ಟಿದ್ದಾರೆ. ಬೌರಿಂಗ್ ಹಾಗೂ ಲೇಡಿ ಕರ್ಜನ್ ಆಸ್ಪತ್ರೆಗೆ ರವಾನಿಸಲಾಗಿದ್ದ ಆರು ಮಂದಿ ಹಾಗೂ ವೈದೇಹಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಲಾಗಿದ್ದ ನಾಲ್ವರು ಮೃತಪಟ್ಟಿದ್ದಾರೆ. ಘಟನೆಯಲ್ಲಿ 20ಕ್ಕೂ ಹೆಚ್ಚು ಜನರು ಅಸ್ವಸ್ಥಗೊಂಡಿದ್ದಾರೆ. ಒಟ್ಟು 16 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. 12 ಜನರಿಗೆ ಚಿಕಿತ್ಸೆ ಮುಂದುವರೆದಿದೆ ಎಂದು ವೈದ್ಯೇಹಿ ಆಸ್ಪತ್ರೆ ವೈದ್ಯೆ ಡಾ. ಉಮೇರಾ ತಿಳಿಸಿದ್ದಾರೆ.

### ಏಕಾಏಕಿ ತಳ್ಳಾಟ-ನೂಕಾಟ

18, 19 ಮತ್ತು 20ನೇ ಗೇಟ್ ಓಪನ್ ಆಗುತ್ತಿದ್ದಂತೆ ಅಭಿಮಾನಿಗಳು ಏಕಾಏಕಿ ಒಳನುಗ್ಗಿದ್ದು, ತಳ್ಳಾಟ, ನೂಕುನುಗ್ಗಲು ಉಂಟಾಗಿದೆ. ಈ ವೇಳೆ ಒಬ್ಬರ ಮೇಲೆ ಮತ್ತೋರ್ವರು ಹತ್ತಲು ಪ್ರಯತ್ನಿಸಿದಾಗ ಕಾಲ್ತುಳಿತ ಉಂಟಾಗಿದೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರು ಲಾಠಿ ಚಾರ್ಜ್ ನಡೆಸಿದರು.



### ಸರ್ಕಾರಿ ಪ್ರಾಯೋಜಿತ ಕೊಲೆ

ಸಂಭ್ರಮದ ಮನೆಯಲ್ಲಿ ಸೂತಕ ಉಂಟಾಗಲು ನೇರ ಕಾರಣ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ. ಈ ಕೊಲೆಗಡುಕ ಸರ್ಕಾರದ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಬೇಕು ಎಂದು ಬಿಜೆಪಿ ಟ್ವೀಟ್ ಮಾಡಿದೆ. ಅಂತೆಯೇ ಇದೇ ವಿಚಾರವಾಗಿ ಟ್ವೀಟ್ ಮಾಡಿರುವ ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ, ಇದು ಪೂರ್ವಸಿದ್ಧತೆಯಿಲ್ಲದ ಸಂಭ್ರಮ, ಸರ್ಕಾರಿ ಪ್ರಾಯೋಜಿತ ಕೊಲೆ. ಈ ಸಾವಿಗೆ ರಾಜ್ಯ ಸರ್ಕಾರವೇ ಹೊಣೆ ಎಂದು ಆಕ್ರೋಶ ಹಾಕಿದ್ದಾರೆ.

### ಸಂಬಂಧಿಕರ ಆಕ್ರಂದನ

ಆರ್‌ಸಿಬಿ ಆಟಗಾರರು ಆಗಮಿಸುವ ಗೇಟ್ ನಂಬರ್ 12ರ ಬಳಿ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ನೆರೆದಿದ್ದ ವೇಳೆ ಭಾರಿ ನೂಕು ನುಗ್ಗಲು ಉಂಟಾಗಿದೆ. ಈ ವೇಳೆ ಗಂಭೀರವಾಗಿ ಅಸ್ವಸ್ಥರಾಗಿದ್ದ ಮಹಿಳಾ ಅಭಿಮಾನಿಯನ್ನು ಕಾರಿನಲ್ಲಿ ಬೌರಿಂಗ್ ಆಸ್ಪತ್ರೆಗೆ ರವಾನಿಸಲಾಯಿತು.

ಇನ್ನೂ ಗೇಟ್ ನಂಬರ್ 6ರ ಬಳಿ ಯುವಕನೋರ್ವ ಗೇಟ್ ಹತ್ತಲು ಹೋಗಿ ಕಾಲು ಮುರಿದುಕೊಂಡಿರುವುದಾಗಿ ವರದಿಯಾಗಿದೆ.

### ಕಾಲ್ತುಳಿತದಲ್ಲಿ ಜಿಲ್ಲೆಯ ಯುವಕ ಸಾವು

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಉಂಟಾದ ನೂಕುನುಗ್ಗಲಿನಲ್ಲಿ ಬೇಲೂರು ತಾಲ್ಲೂಕಿನ ಕುಪ್ಪಗೋಡು ಗ್ರಾಮದ ಎಂಜಿನೀಯರಿಂಗ್ ವಿದ್ಯಾರ್ಥಿ ಮೃತಪಟ್ಟಿದ್ದಾನೆ. ಅರೇಹಳ್ಳಿ ಹೋಬಳಿ ಕುಪ್ಪಗೋಡು ಗ್ರಾಮದ ಡಿ.ಟಿ. ಲಕ್ಷ್ಮಣ್ ಹಾಗೂ ಅಶ್ವಿನಿ ದಂಪತಿ ಪುತ್ರ ಭೂಮಿಕ್ (20) ಮೃತ ದುರ್ದೈವಿ. ಬೆಂಗಳೂರಿನಲ್ಲಿ ದ್ವಿತೀಯ ವರ್ಷದ ಎಂಜಿನೀಯರಿಂಗ್ ಓದುತ್ತಿದ್ದ ಭೂಮಿಕ್ ಕಾಲೇಜು ಮುಗಿಸಿ ಸ್ನೇಹಿತರೊಂದಿಗೆ ಚಿನ್ನಸ್ವಾಮಿ ಕ್ರೀಡಾಂಗಣದತ್ತ ತೆರಳಿದ್ದ. ಕ್ರೀಡಾಂಗಣದ ಒಳಗೆ ಹೋಗುತ್ತಿದ್ದಾಗ ಉಂಟಾದ ನೂಕಾಟದಲ್ಲಿ ಸಿಲುಕಿ ಮೃತಪಟ್ಟಿದ್ದಾನೆ.

ಡಿ.ಟಿ. ಲಕ್ಷ್ಮಣ್ ಅವರು ಬೆಂಗಳೂರಿನಲ್ಲಿ ಸಣ್ಣ ಕೈಗಾರಿಕೆ ನಡೆಸುತ್ತಿದ್ದು ಕಳೆದ 20 ವರ್ಷದಿಂದ ರಾಜಧಾನಿಯಲ್ಲೇ ವಾಸವಿದ್ದಾರೆ.

### ಸಂಭ್ರಮ ಮರೆಸಿದ ಘಟನೆ

ಈ ಘಟನೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಸಂತಾಪ ಸೂಚಿಸಿದ್ದಾರೆ. ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ತಂಡದ ಗೆಲುವಿನ ಸಂಭ್ರಮಾಚರಣೆ ವೇಳೆ ನೂಕುನುಗ್ಗಲು ಉಂಟಾಗಿ ಹಲವರು ಪ್ರಾಣ ಕಳೆದುಕೊಂಡು, ಮತ್ತೆ ಕೆಲವರು ಗಂಭೀರ ಗಾಯಗೊಂಡ ಸುದ್ದಿ ಕೇಳಿ ತೀವ್ರ ಆಘಾತವಾಗಿದೆ. ಈ ದುರಂತದ ನೋವು ಗೆಲುವಿನ ಸಂಭ್ರಮವನ್ನೂ ಅಳಿಸಿಹಾಕಿದೆ ಎಂದು ತಿಳಿಸಿದ್ದಾರೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರು ಆದಷ್ಟು ಬೇಗ ಗುಣಮುಖರಾಗಲಿ ಎಂದು ಹಾರೈಸುತ್ತೇನೆ. ತಮ್ಮವರನ್ನು ಕಳೆದುಕೊಂಡ ದುಃಖತಪ್ತ ಕುಟುಂಬಗಳಿಗೆ ನನ್ನ ಸಂತಾಪಗಳು ಎಂದು ಹೇಳಿದ್ದಾರೆ. ಇಂತಹದ್ದೊಂದು ನೂಕುನುಗ್ಗಲು ನಡೆದು ಜನಸಂದಣಿಯನ್ನು ನಿಯಂತ್ರಣ ಮಾಡಲಾಗದೆ ಅಹಿತಕರ ಘಟನೆ ನಡೆಯಬಹುದೆಂಬ ನಿರೀಕ್ಷೆಯಿಂದಲೇ ತಂಡದ ವಿಜಯಯಾತ್ರೆಗೆ ಅವಕಾಶ ನೀಡದೆ ಮುಂಜಾಗ್ರತೆ ವಹಿಸಲಾಗಿತ್ತು. ಹೀಗಿದ್ದರೂ ಕ್ರೀಡಾಂಗಣದ ಬಳಿ ಜನ ಕಿಕ್ಕಿರಿದು ಸಾಗರದಂತೆ ಸೇರಿದ್ದ ಕಾರಣ ನೂಕುನುಗ್ಗಲು ನಡೆದು ಕಾಲ್ತುಳಿತದಿಂದ ಈ ಅವಘಡ ಸಂಭವಿಸಿದೆ ಎಂದು ತಿಳಿಸಿದ್ದಾರೆ. ಪ್ರೀತಿ-ಅಭಿಮಾನ ಈ ಎಲ್ಲಕ್ಕಿಂತ ಜೀವ ಮುಖ್ಯ ಎನ್ನುವುದನ್ನು ಅರ್ಥ ಮಾಡಿಕೊಂಡು, ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡುತ್ತೇನೆ ಎಂದು ಹೇಳಿದ್ದಾರೆ.

## ಕಸಾಯಿಖಾನೆಗೆ ಸಾಗಿಸುತ್ತಿದ್ದ ಗೋವು ರಕ್ಷಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಗ್ರಾಮಾಂತರ ಹಾಗೂ ನಗರ ಠಾಣೆಗಳಲ್ಲಿ ಅಕ್ರಮ ಗೋ ಸಾಗಾಟ - ಗೋಮಾಂಸ ಮಾರಾಟ ಪ್ರಕರಣ ದಿನೇ ದಿನೆ ಹೆಚ್ಚಾಗುತ್ತಿವೆ.

ಬೆಳ್ಳಂ ಬೆಳಿಗ್ಗೆ ಬಕ್ರಿದ್ ಹಬ್ಬದ ಹಿನ್ನೆಲೆ ಕಾರ್ಯಾಚರಣೆ ಮಾಡುತ್ತಿದ್ದ ಹಿಂದು ಹಿತರಕ್ಷಣಾ ವೇದಿಕೆಯ ಕಾರ್ಯಕರ್ತರು ಹಾನುಬಾಳು ಭಾಗದಿಂದ ಬರುತ್ತಿದ್ದ ಕೆಎ-42-ಬಿ-4431 ಅಶೋಕ್ ಲೇಲ್ಯಾಂಡ್ ವಾಹನವನ್ನು ಬೆನ್ನಟ್ಟಿ ನಗರ ಠಾಣೆ ವ್ಯಾಪ್ತಿಯ ಕೆಂಪೇಗೌಡ ಪುತ್ಥಳಿಯ ವೃತ್ತದ ಬಳಿ ವಾಹನ ತಡೆಯಲು ಯಶಸ್ವಿಯಾಯಿತು. ಈ ವೇಳೆ ಅಶೋಕ್ ಲೇಲ್ಯಾಂಡ್ ವಾಹನದಲ್ಲಿ ಹಿಂಸಾತ್ಮಕ ರೀತಿಯಲ್ಲಿ 6 ಗೋವುಗಳನ್ನು ಅಕ್ರಮವಾಗಿ ತುಂಬಿರುವುದು ಕಂಡು ಬಂದು, ಕೂಡಲೇ ನಗರ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದರು. ತಕ್ಷಣ ಕಾರ್ಯಪ್ರವೃತ್ತರಾದ ನಗರ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ವಾಹನವನ್ನು ವಶಕ್ಕೆ ತೆಗೆದುಕೊಂಡರು. ಈ ವೇಳೆ ಗೋವುಗಳನ್ನು ರಕ್ಷಣೆ ಮಾಡಿ, ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

## ಪುರಸಭೆ ಅಧ್ಯಕ್ಷರ ವಿರುದ್ಧ ಅವಿಶ್ವಾಸ

### ಕಾಂಗ್ರೆಸ್ ಉಪಾಧ್ಯಕ್ಷೆ ಉಷಾಗೆ ಪ್ರಭಾರ ಸ್ಥಾನ | ಎ.ಆರ್. ಅಶೋಕ್‌ಗೆ ಮುಖಭಂಗ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಪುರಸಭೆ ಅಧ್ಯಕ್ಷರಾಗಿದ್ದ ಎ.ಆರ್. ಅಶೋಕ್ ಅವರು ಕಡೆಗೂ ಅಧ್ಯಕ್ಷ ಸ್ಥಾನ ಕಳೆದುಕೊಂಡಿದ್ದಾರೆ.

ಕಾಂಗ್ರೆಸ್ ಸದಸ್ಯರು ಈ ಹಿಂದೆ ಅಶೋಕ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದರು. ಆದರೆ ಸಭೆ ಗೊಂದಲದ ಗೂಡಾಗಿ ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿ ಸಭೆ ಮುಂದೂಡಿಕೆ ಆಗಿತ್ತು. ನಂತರ ನಡೆದ ಇನ್ನೊಂದು ಸಭೆಯಲ್ಲಿ ಅಶೋಕ್ ಅವರೇ ನಾನು ವಿಶ್ವಾಸ ಗೆದ್ದಿದ್ದೇನೆ, ಹಾಗಾಗಿ ಅಧ್ಯಕ್ಷನಾಗಿ ಮುಂದುವರಿಯುವೆ ಎಂದು ಹೇಳಿದ್ದರು. ಇದಕ್ಕೆ ಅವಕಾಶ ಕೊಡದ ಕೈ ಸದಸ್ಯರು ಜೂ. 4 ರಂದು ಮತ್ತೊಮ್ಮೆ ಸಭೆ ನಿಗದಿಪಡಿಸಿ ಅವಿಶ್ವಾಸ ನಿರ್ಣಯ ಮಂಡನೆಗೆ ಪಟ್ಟು ಹಿಡಿದರು. ಅದರಂತೆ ಬುಧವಾರ ನಡೆದ ಅವಿಶ್ವಾಸ ನಿರ್ಣಯ ಸಭೆಯಲ್ಲಿ ಸಂಸದ ಶ್ರೇಯಸ್ ಪಟೇಲ್ ಹಾಗೂ 16 ಮಂದಿ ಕೈ ಸದಸ್ಯರು ಸೇರಿ ಒಟ್ಟು 17 ಮಂದಿ ಅವಿಶ್ವಾಸದ ಪರವಾಗಿ



ಕೈ ಎತ್ತಿದರು.


ಈ ಹಿನ್ನೆಲೆಯಲ್ಲಿ ಎ.ಆರ್. ಅಶೋಕ್ ತಮ್ಮ ಸ್ಥಾನ ಕಳೆದುಕೊಂಡರು. ಈ ವಿಷಯವನ್ನು ಪುರಸಭಾ ಮುಖ್ಯಾಧಿಕಾರಿ ಸುಜಯ್ ಅಧಿಕೃತವಾಗಿ ಘೋಷಣೆ ಮಾಡಿದರು. ಸಭೆಗೆ ಅಧ್ಯಕ್ಷರಾಗಿದ್ದ ಎ.ಆರ್. ಅಶೋಕ್ ಸೇರಿ ಜೆಡಿಎಸ್‌ನ ಐವರು ಮತ್ತು ಬಿಜೆಪಿಯ ಒಬ್ಬರು ಗೈರಾಗಿದ್ದರು. ಕಳೆದ ಮೇ 2 ರಂದು ಪುರಸಭಾ ಅಧ್ಯಕ್ಷ ಎ.ಆರ್. ಅಶೋಕ್ ವಿರುದ್ಧ ಸ್ವಪಕ್ಷಿಯರೇ ಅವಿಶ್ವಾಸ ನಿರ್ಣಯ ಮಂಡಿಸಲು ಮುಂದಾಗಿದ್ದ ಸಭೆಯಲ್ಲಿ ಕಾಂಗ್ರೆಸ್ ಸದಸ್ಯರ ಗೊಂದಲದಿಂದ ಸಭೆಯನ್ನು ಉಪಾಧ್ಯಕ್ಷೆ ಉಷಾ ಸತೀಶ್ ಮುಂದೂಡಿದ್ದರು.

ಬಳಿಕ ಅಧ್ಯಕ್ಷ ಎ.ಆರ್.ಅಶೋಕ್ ನ್ಯಾಯಾಲಯ ಮೊರೆ ಹೋಗಿದ್ದರು. ಆದರೆ ನ್ಯಾಯಾಲಯ ಯಾವುದೇ ತಡೆ ನೀಡದೆ ಜೂ.4 ರಂದು ಅವಿಶ್ವಾಸ ಮಂಡಿಸಲು ಅವಕಾಶ ನೀಡಿತ್ತು. ಅದರಂತೆ ಮಧ್ಯಾಹ್ನ 12.30 ಕ್ಕೆ ಉಪಾಧ್ಯಕ್ಷೆ ಉಷಾ ಸತೀಶ್ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಾಮಾನ್ಯ ಸಭೆ ಹಾಗೂ ಅವಿಶ್ವಾಸ ನಿರ್ಣಯ ಸಭೆಯಲ್ಲಿ ಅವಿಶ್ವಾಸದ ಪರವಾಗಿ 17 ಬಂದ ಹಿನ್ನಲೆಯಲ್ಲಿ ಅಶೋಕ್ ಅಧ್ಯಕ್ಷ ಸ್ಥಾನ ಕಳೆದುಕೊಂಡರು.

ಈ ನಡುವೆ ಅನಾರೋಗ್ಯ ಹಿನ್ನೆಲೆ ಸಭೆಗೆ ಗೈರಾದ ಅಶೋಕ್ ವಿರುದ್ಧ ಕೈಪಾಳೆಯದ ಸದಸ್ಯರು ತೀವ್ರ ವಾಗ್ದಾಳಿ ನಡೆಸಿದರು. ಬಳಿಕ ಪ್ರಭಾರಿ ಅಧ್ಯಕ್ಷರಾಗಿ ಉಷಾಸತೀಶ್ ಅವರಿಗೆ ಅಧಿಕಾರ ವಹಿಸಿ ನೀಡಿ ಸಭೆಯಲ್ಲಿದ್ದವರು ಶುಭ ಕೋರಿದರು.

ಈ ವೇಳೆ ಮಾತನಾಡಿದ ಸದಸ್ಯ ಜಿ.ಶಾಂತಕುಮಾರ್, ಪುರಸಭೆಯ ಒಟ್ಟು 17 ಸದಸ್ಯರು ಒಟ್ಟಾಗಿ ಪಕ್ಷದ ವರಿಷ್ಠರ ನಿರ್ಣಯದಂತೆ ಅಶೋಕ್ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಿದ ದಿನದಿಂದ ಅಶೋಕ್ ಅಧಿಕಾರ ಮದದಿಂದ ಅಂಗರಕ್ಷಕರನ್ನು ಇಟ್ಟುಕೊಂಡು ಪುರಸಭೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಸಿದ್ದಾರೆ. ಈತ ನಡೆಸುವ ಭ್ರಷ್ಟಾಚಾರಕ್ಕೆ ಸ್ಥಳೀಯ ಶಾಸಕರು ಕುಮ್ಮಕ್ಕು ನೀಡಿದ್ದಾರೆ ಎಂದು ಆರೋಪಿಸಿದರು. ಅಶೋಕ್ ಅವಧಿಯಲ್ಲಿ ಭಾರೀ ಭ್ರಷ್ಟಾಚಾರದ ಬಗ್ಗೆ ಶೀಘ್ರವೇ ಲೋಕಾಯುಕ್ತರಿಗೆ ದೂರು ನೀಡಲಾಗುತ್ತದೆ. ನಾನು ಕೂಡ ಅಧ್ಯಕ್ಷ ಸ್ಥಾನಕ್ಕೆ ಪ್ರಬಲ ಆಕಾಂಕ್ಷಿಯಾಗಿದ್ದು, ಪಕ್ಷದ ನಿರ್ಣಯಕ್ಕೆ ನಮ ಒಪ್ಪಿಗೆ ಇದೆ ಎಂದರು.

## ಜನ ಸೇವೆ ಜನಪ್ರತಿನಿಧಿಗಳ ಜವಾಬ್ದಾರಿ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಜನರನ್ನು ಉದ್ದೇಶಪೂರ್ವಕವಾಗಿ ಗೋಳಾಡಿಸಿಕೊಳ್ಳದೇ ಸಕರಾತ್ಮಕವಾಗಿ ಸ್ಪಂದಿಸಿ ಕೆಲಸ ಮಾಡಿಕೊಡುವ ಗುರುತರ ಜವಾಬ್ದಾರಿ ಚುನಾಯಿತ ಪ್ರತಿನಿಧಿಗಳದ್ದಾಗಿದೆ ಎಂದು ಶಾಸಕ ಎ.ಮಂಜು ತಿಳಿಸಿದರು.

ತಾಲ್ಲೂಕಿನ ಬನ್ನೂರು ಗ್ರಾಮದಲ್ಲಿ ನೂತನ ಗ್ರಾಪಂ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಪಂ ಸದಸ್ಯರಿಂದ ಎಂಎಲ್‌ಎ ತನಕ ಮತ ನೀಡಿರುವವರು ಜನರೇ ಆಗಿರುತ್ತಾರೆ. ಜನರಿಂದ ಮತ ಪಡೆದಿರುವ ನಾವುಗಳು ನಮ್ಮ ಜವಾಬ್ದಾರಿಯನ್ನು ಅರಿತು ಸೇವೆ ಮಾಡಬೇಕಿದೆ. ಯಾರೂ ಕೂಡ ತಮ್ಮ ಮನೆಯಿಂದ ಸವಲತ್ತು ಕೊಡಲ್ಲ. ಸರ್ಕಾರದಿಂದ ದೊರೆಯುವ ಸೌಕರ್ಯಗಳನ್ನು ಸಮರ್ಪಕವಾಗಿ ತಲುಪಿಸುವ ಕಾಯಕವನ್ನು ಕೈಗೊಂಡರೇ ಜನರ ವಿಶ್ವಾಸವನ್ನು ಉಳಿಸಿಕೊಂಡಂತ್ತಾಗುತ್ತದೆ ಎಂದು ಹೇಳಿದರು. ಇದೂವರೆಗೂ ಮನೆಗಳ ಖಾತೆ,ಇ-ಸ್ವತ್ತು ಮಾಡಿಸಿಕೊಳ್ಳದೇ ಇರುವವರು ತಮ್ಮ ಕುಟುಂಬ ನಿಖರ ಮಾಹಿತಿಯನ್ನು ದಾಖಲೆಗಳ ಮೂಲಕ ಸಲ್ಲಿಸಿ ಸ್ವತ್ತಿನ ಮಾಲೀಕತ್ವವನ್ನು ಪಡೆದುಕೊಳ್ಳಬೇಕು. ಕೇವಲ ಮಾತಿನ ಆರೋಪಕ್ಕೆ ಸೀಮಿತಗೊಳ್ಳದೇ ಪೂರಕ ದಾಖಲೆಗಳನ್ನು ಸಲ್ಲಿಸಿ ಪ್ರಯೋಜನ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

# ಆಲೂರಿನಲ್ಲಿ ಟ್ರಾಫಿಕ್ ಸಮಸ್ಯೆಗೆ ಪರಿಹಾರ ಕಲ್ಪಿಸಿ

## ಪಪಂ ಅಧ್ಯಕ್ಷೆ ತಾಹೇರಾ ಬೇಗಂ ಸೂಚನೆ | ಸಾಮಾನ್ಯ ಸಭೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಪಟ್ಟಣದಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿ ಸಾರ್ವಜನಿಕ ಸಂಚಾರಕ್ಕೆ ಭಾರಿ ತೊಂದರೆಯಾಗಿದ್ದು ಪೊಲೀಸ್ ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಪಟ್ಟಣ ಪಂಚಾಯಿತಿ ಅಧ್ಯಕ್ಷೆ ತಾಹೇರಾ ಬೇಗಂ ಸೂಚಿಸಿದರು.

ಪಪಂ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಾಮಾನ್ಯ ಸಭೆಯಲ್ಲಿ ಮಾತನಾಡಿ, ಪಟ್ಟಣದಲ್ಲಿ ಸಂಚಾರ ಸುಗಮಕ್ಕೆ ಪೊಲೀಸರ ಸಹಕಾರ ಅಗತ್ಯವಾಗಿದೆ. ಪಟ್ಟಣದ ಮುಖ್ಯ ರಸ್ತೆ ಬದಿಯಲ್ಲಿರುವ ಅಂಗಡಿಗಳು ರಸ್ತೆಯಂಚಿಗೆ ತಾಕಿರುವುದರಿಂದ ಜನರು ಮತ್ತು ವಾಹನ ಓಡಾಟಕ್ಕೆ ತೊಂದರೆಯಾಗಿದೆ. ಪಾರ್ಕಿಂಗ್




ವ್ಯವಸ್ಥೆಯಾಗಬೇಕು. ಪ್ರತಿದಿನ ಸಂಚಾರಿ ಪೊಲೀಸರು ಗಸ್ತು ತಿರುಗಿ, ನಿಯಮ ಮೀರುವವರನ್ನು ಎಚ್ಚರಿಸಬೇಕು ಎಂದರು.

ಸಬ್ ಇನ್ಸ್‌ಪೆಕ್ಟರ್ ಜನಾಬಾಯಿ ಕಡಪಟ್ಟಿ ಮಾತನಾಡಿ, ರಸ್ತೆಯಂಚಿನಲ್ಲಿ ಮೀಸಲಾಗಿರುವ ಜಾಗವನ್ನು ಗುರುತು ಮಾಡಿದರೆ ನಿಯಮ ಮೀರಿದವರಿಗೆ ಕಾನೂನು ಕ್ರಮ ಜರುಗಿಸಲಾಗುವುದು. ಭಾರಿ ಗಾತ್ರದ ವಾಹನಗಳು ಭೈರಾಪುರ ಟೋಲ್ ತಪ್ಪಿಸಿಕೊಂಡು ಪಟ್ಟಣದೊಳಗೆ ಬರುತ್ತಿವೆ. ಮಳೆ ಕಡಿಮೆಯಾದ ನಂತರ ಅಂತಹ ವಾಹನಗಳಿಗೆ ದಂಡ ವಿಧಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೂಚನೆ ನೀಡಿದ್ದಾರೆ. ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಪ್ರತಿಭಟನೆ ಎಚ್ಚರಿಕೆ: ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಕುಡಿಯುವ ನೀರಿಗಾಗಿ ಅಳವಡಿಸಿರುವ ಎಕ್ಸ್‌ಪ್ರೆಸ್ ಫೀಡರ್‌ನಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸದಿದ್ದರೆ ಸೆಸ್ಕ್ ಕಚೇರಿ ಎದುರು ಪ್ರತಿಭಟನೆ ನಡೆಸುವುದಾಗಿ ತಾಹೇರಾ ಬೇಗಂ ಹಾಗೂ ಸದಸ್ಯರು ಎಚ್ಚರಿಕೆ ನೀಡಿದರು.

ಪಟ್ಟಣ ವ್ಯಾಪ್ತಿಯ ಕುಟುಂಬಗಳಿಗೆ ಕುಡಿಯುವ ನೀರು ಸರಬರಾಜಿನಲ್ಲಿ ತೊಂದರೆಯಾಗಬಾರದೆಂದು ನಿರಂತರ ವಿದ್ಯುತ್ ಸಂಪರ್ಕಕ್ಕಾಗಿ ಕೋಟ್ಯಾಂತರ ರೂ. ಖರ್ಚು ಮಾಡಿ ಎಕ್ಸ್‌ಪ್ರೆಸ್ ಫೀಡರ್ ಮಾಡಲಾಗಿದೆ. ಸುಮಾರು 25 ಲಕ್ಷ ರೂ. ಠೇವಣಿ ಸಹ ಇಡಲಾಗಿದೆ. ಸುಮಾರು ಮೂರು ವರ್ಷಗಳಿಂದ ಎಕ್ಸ್‌ಪ್ರೆಸ್ ಫೀಡರ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸದೆ ಆಗಾಗ ವಿದ್ಯುತ್ ವ್ಯತ್ಯಯದಿಂದ ಮಳೆಗಾಲದಲ್ಲೂ ಕುಡಿಯುವ ನೀರು ಸರಬರಾಜು ಮಾಡಲು ತೊಂದರೆಯಾಗಿದೆ ಎಂದು ಸದಸ್ಯ ತೌಫಿಕ್ ವಿಷಯ ಪ್ರಸ್ತಾಪಿಸಿದರು.

ಮುಖ್ಯಾಧಿಕಾರಿ ಮಂಜುನಾಥ್ ಅವರು, ಪ್ರತಿದಿನ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಯವಾಗಿರುವ ದಾಖಲಾತಿಯನ್ನು ಪ್ರದರ್ಶಿಸಿದರು. ಈ ಕೂಡಲೇ ಕ್ರಮ ಕೈಗೊಂಡು ನಿರಂತರವಾಗಿ ವಿದ್ಯುತ್ ಸಂಪರ್ಕ ಒದಗಿಸದಿದ್ದರೆ ಸೆಸ್ಕ್ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ ಎಂದು ಸಭೆಯಲ್ಲಿ ಸೆಸ್ಕ್ ಎಂಜೀನಿಯರ್‌ಗೆ ಎಚ್ಚರಿಕೆ ನೀಡಿದರು.

ಸೆಸ್ಕ್ ಸಹಾಯಕ ಎಂಜಿನೀಯರ್ ಕುಮಾರ್ ಮಾತನಾಡಿ, ಆಲೂರಿಗೆ ಪ್ರತ್ಯೇಕ ವಿದ್ಯುತ್ ಪ್ರಸರಣ ಕೇಂದ್ರವಿಲ್ಲದೆ ತೊಂದರೆಯಾಗಿದೆ. ಬಹುತೇಕ ವಿದ್ಯುತ್ ಲೈನ್‌ಗಳು ಗದ್ದೆಗಳಲ್ಲಿ ಹಾದು ಹೋಗಿವೆ. ಗಾಳಿ, ಮಳೆಯಲ್ಲಿ ಅಡಚಣೆಯಾದ ಸಂದರ್ಭದಲ್ಲಿ ದುರಸ್ತಿಗೊಳಿಸಲು ಕಾಲಮಿತಿ ವಿಳಂಬವಾಗಲಿದೆ. ಎಕ್ಸ್‌ಪ್ರೆಸ್ ಫೀಡರ್ ಸಂಪರ್ಕ ಕಲ್ಪಿಸುವ ಬಗ್ಗೆ ಹಿರಿಯ ಅಧಿಕಾರಿಗಳೊಡನೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಪಟ್ಟಣ ಪಂಚಾಯಿತಿ ಕಚೇರಿಗೆ ಅಗತ್ಯವಿರುವ ಮಾಸಿಕ ಬಾಡಿಗೆ ಆಧಾರದ ಮೇಲೆ ಕರೆಯಲಾಗಿರುವ ಕಾರಿನ ಟೆಂಡರ್ ಅನ್ನು ಅನುಮೋದಿಸಲು, ಫುಡ್ ಕೋರ್ಟ್ ನಿರ್ಮಾಣ, ರೆಕಾರ್ಡ್ ರೂಮ್ ನವೀಕರಣ, ವೆಂಕಟೇಶ್ವರ ಕಲ್ಯಾಣ ಮಂಟಪದ ಹತ್ತಿರ 25 ಮೀ. ಚರಂಡಿ ನಿರ್ಮಾಣ, ಫಿಲ್ಟರ್ ಹೌಸ್ ಮತ್ತು ಪಂಪ್ ಹೌಸ್‌ಗಳಲ್ಲಿ ಮೋಟಾರು ದುರಸ್ತಿಗೆ, ನೀರು ಸರಬರಾಜು ವಿಭಾಗಕ್ಕೆ ಸಾಮಾಗ್ರಿಗಳನ್ನು ಸರಬರಾಜು ಮಾಡಲು ವಾರ್ಷಿಕ ನಿರ್ವಹಣೆ, ಕೊಳವೆಬಾವಿ ವಾರ್ಷಿಕ ನಿರ್ವಹಣೆ, ಸಭಾಂಗಣಕ್ಕೆ ಪೀಠೋಪಕರಣಗಳನ್ನು ಅಳವಡಿಸುವುದು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಕೊಠಡಿ ನವೀಕರಣ, ಕಚೇರಿ ಮಾಳ್ಬಾಗದಲ್ಲಿ ಶೀಟ್ ಹಾಕಿಸಲು, ಬೀದಿ ದೀಪ ನಿರ್ವಹಣೆ ಟೆಂಡರನ್ನು ಅನುಮೋದಿಸಿ ಸಭೆ ಒಪ್ಪಿಗೆ ಸೂಚಿಸಿತು.

2025 ಜನವರಿಯಿಂದ ಮೇ ಮಾಹೆವರೆಗೆ ಆಗಿದ್ದ ಜಮಾ ಖರ್ಚಿನ ವಿವರಗಳನ್ನು ಸಭೆಯಲ್ಲಿ ಮಂಡಿಸಲಾಯಿತು. ಪಕ್ಕದಲ್ಲಿರುವ ಕಟ್ಟಡದ ನೆಲ ಅಂತಸ್ತನ್ನು ಬಾಡಿಗೆಗೆ ನೀಡಿ, ಮೊದಲ ಅಂತಸ್ತಿನಲ್ಲಿ ಅಗತ್ಯವಾದಲ್ಲಿ ಸಭಾಂಗಣವನ್ನು ವರ್ಗಾಯಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಗಡಿ ಪ್ರದೇಶದಂಚಿನಲ್ಲಿ ಆಲೂರು ಪಟ್ಟಣ ಪಂಚಾಯಿತಿಗೆ ಹೊಂದಿಕೊಂಡಿರುವ ಭೈರಾಪುರ, ಹುಣಸವಳ್ಳಿ ಪಂಚಾಯಿತಿಗೊಳಪಡುವ ಕೆಲ ನಿವಾಸಿಗಳನ್ನು ನಮ್ಮ ಪಂಚಾಯಿತಿಗೆ ಸೇರಿಸಿಕೊಳ್ಳಲು ಮತ್ತು ಯಾವುದೇ ವಾರ್ಡ್‌ಗೆ ನೂತನವಾಗಿ ನಾಮಕರಣ ಮಾಡಲು ಸರ್ಕಾರದಿಂದ ಅನುಮೋದನೆ ಪಡೆಯಬೇಕು ಎಂದು ಮುಖ್ಯಾಧಿಕಾರಿ ಮಾಹಿತಿ ನೀಡಿದರು.

ಸಭೆಯಲ್ಲಿ ಸದಸ್ಯರಾದ ತೌಫಿಕ್, ಧರ್ಮ, ಹರೀಶ್, ಸಂತೋಷ್, ಖಾಲೀದ್ ಪಾಷ, ಸಂದೇಶ್, ಶೀಲಾ, ಮತ್ತು ಸಿಬ್ಬಂದಿ ಲಲಿತಮ್ಮ, ಜಯಲಕ್ಷ್ಮಿ, ಗಣೇಶ್ ಹಾಜರಿದ್ದರು.

# ರಷ್ಯಾ-ಉಕ್ರೇನ್ ಯುದ್ಧ: ಡಿಎಪಿ ಗೊಬ್ಬರ ಅಭಾವ

## ಪರ್ಯಾಯ ಗೊಬ್ಬರ ಅವಲಂಬನೆ ಅನಿವಾರ್ಯ : 4 ಸಾವಿರ ಮೆಟ್ರಿಕ್ ಟನ್ ಮಾತ್ರ ದಾಸ್ತಾನು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮುಂಗಾರು ಬಿತ್ತನೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ರಸಗೊಬ್ಬರ ಅಗತ್ಯಕ್ಕೆ ತಕ್ಕಷ್ಟು ದಾಸ್ತಾನಿದೆಯಾದರೂ ಡಿಎಪಿ ಗೊಬ್ಬರಕ್ಕೆ ಅಭಾವ ಎದುರಾಗುವ ಸಾಧ್ಯತೆಯಿದೆ.

ರಷ್ಯಾ ಹಾಗೂ ಉಕ್ರೇನ್ ಯುದ್ಧ ಕಾರ್ಮೋಡದಿಂದ ಡಿಎಪಿ ಗೊಬ್ಬರಕ್ಕೆ ಬಳಸುವ ಆಸ್ಪಿರಿಕ್ ಆಸಿಡ್ ಲಭ್ಯವಾಗದೆ ಡಿಎಪಿ ಉತ್ಪಾದನೆಯಲ್ಲಿ ಕುಂಠಿತವಾಗಿದೆ. ಸದ್ಯ ಜಿಲ್ಲೆಯಲ್ಲಿ 4 ಸಾವಿರ ಮೆಟ್ರಿಕ್ ಟನ್ ಡಿಎಪಿ ಗೊಬ್ಬರವಿದೆ. ಅದು ಖಾಲಿಯಾದರೆ ಮತ್ತೆ ಪೂರೈಕೆಯಾಗುವುದು ಅನುಮಾನ. ಆದ್ದರಿಂದ ಡಿಎಪಿಗೆ ಪರ್ಯಾಯವಾದ 10 26 26, 20 20 13, 15 15 15, 19 19 19, 12 16 32 ಗೊಬ್ಬರ ಸುಮಾರು 25 ಸಾವಿರ ಮೆಟ್ರಿಕ್ ಟನ್‌ನಷ್ಟು ದಾಸ್ತಾನಿದ್ದು ರೈತರು ಅದನ್ನೇ ಪಡೆಯಬೇಕಾಗುತ್ತದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

> ಜಿಲ್ಲಾದ್ಯಂತ ವಾಡಿಕೆ ಮಳೆಗಿಂತ ಶೇ. 111 ರಷ್ಟು ಹೆಚ್ಚು ಮಳೆಯಾಗಿದ್ದು ಮುಂಗಾರು ಬಿತ್ತನೆಗೆ ಸಿದ್ಧತೆ ನಡೆದಿದೆ. ಇನ್ನು ಮುಂದೆ ಮಳೆಯಾದರೂ ಕೃಷಿ ಚಟುವಟಿಕೆಗೆ ಹಿನ್ನಡೆಯಾಗಬಹುದು. ಸದ್ಯ ಬಿಸಿಲು ಬಂದರೆ ಮೆಕ್ಕೆಜೋಳ ಬಿತ್ತನೆಗೆ ಅನುಕೂಲವಾಗುತ್ತದೆ.
>
> **- ಪಿ. ರಮೇಶ್‌ಕುಮಾರ್, ಜಂಟಿ ಕೃಷಿ ನಿರ್ದೇಶಕ**



### ವಾಡಿಕೆಗಿಂತ ಶೇ. 111 ಹೆಚ್ಚು ಮಳೆ

ಜಿಲ್ಲಾದ್ಯಂತ ಪೂರ್ವ ಮುಂಗಾರು ಮಳೆ ವಾಡಿಕೆಗಿಂತ ಶೇ. 111 ಪಟ್ಟು ಅಧಿಕವಾಗಿ ಕೃಷಿ ಚಟುವಟಿಕೆಗೆ ಪೂರಕವಾಗಿದೆಯಾದರೂ ಮತ್ತೆ ವರುಣನ ಆರ್ಭಟ ಮುಂದುವರೆದರೆ ಮುಂಗಾರು ಬಿತ್ತನೆಗೆ ಅಡ್ಡಿಯಾಗುವ ಆತಂಕ ರೈತರನ್ನು ಕಾಡುತ್ತಿದೆ.

ಕಳೆದ ಹತ್ತು ದಿನಗಳಿಂದ ಜಿಲ್ಲಾದ್ಯಂತ ಜೋರು ಮಳೆಯಾಗುತ್ತಿದೆ. ಮುಂಗಾರು ಆರಂಭಕ್ಕೂ ಮೊದಲೇ ಶುರುವಾದ ಮಳೆ ಬಿತ್ತನೆಗಾಗಿ ಭೂಮಿ ಹದ ಮಾಡಿಕೊಂಡಿರುವ ರೈತರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಸದ್ಯ ಜಮೀನುಗಳಲ್ಲಿ ನೀರು ನಿಂತಿದ್ದು ಬಿತ್ತನೆ ಚಟುವಟಿಕೆ ಪ್ರಾರಂಭಿಸಬೇಕೆಂದರೆ ಕನಿಷ್ಟ ಒಂದು ವಾರದ ಮಟ್ಟಿಗಾದರೂ ಮಳೆರಾಯ ವಿಶ್ರಾಂತಿಯಲ್ಲಿರಬೇಕು. ಆದರೆ ದಿನವೂ ಮಳೆ ಮುಂದುವರೆದು ಮೋಡ ಕವಿದ ವಾತಾವರಣ ನಿರ್ಮಾಣವಾಗಿರುವುದರಿಂದ ಸಮಸ್ಯೆಯಾಗಿದೆ. ಪೂರ್ವ ಮುಂಗಾರು ಆರಂಭಕ್ಕೂ ಮುನ್ನ ಕೆಲವು ಪ್ರದೇಶಗಳಲ್ಲಿ ಬಿತ್ತನೆ ಕಾರ್ಯ ನಡೆದಿದ್ದು ಅದು ನಷ್ಟಕ್ಕೀಡಾಗುವ ಆತಂಕ ಮತ್ತೊಂದೆಡೆ ಕಾಡುತ್ತಿದೆ.

### ಎಲ್ಲೆಲ್ಲಿ ಎಷ್ಟು ಮಳೆ

ಕೃಷಿ ಇಲಾಖೆ ಮಾಹಿತಿ ಪ್ರಕಾರ 2025ರ ಜನವರಿ 1 ರಿಂದ ಜೂನ್ 3ರ ವರೆಗೆ ಜಿಲ್ಲೆಯಲ್ಲಿ 176.4 ಮಿ.ಮೀ. ವಾಡಿಕೆ ಮಳೆಯಾಗಬೇಕಿತ್ತು. ಆದರೆ 372.4 ಮಿ.ಮೀ. ಮಳೆ ಸುರಿದು ಶೇ. 111 ರಷ್ಟು ಹೆಚ್ಚುವರಿಯಾಗಿದೆ.

ಆಲೂರಿನಲ್ಲಿ 207.6 ಮಿ.ಮೀ. ವಾಡಿಕೆಯಿದ್ದರೆ 338.6 ಮಿ.ಮೀ. ಸುರಿದು ಶೇ. 63 ರಷ್ಟು ಹೆಚ್ಚಾಗಿದೆ. ಅರಕಲಗೂಡು ತಾಲ್ಲೂಕಿನಲ್ಲಿ ವಾಡಿಕೆ ಮಳೆ ಪ್ರಮಾಣ 172.3 ಮಿ.ಮೀ.ಯಷ್ಟಿದ್ದು 342.1 ಮಿ.ಮೀ. ಸುರಿದು ಶೇ. 99 ರಷ್ಟು ಹೆಚ್ಚಾಗಿದೆ. ಅರಸೀಕೆರೆಯಲ್ಲಿ 169.2 ಮಿ.ಮೀ. ಪೈಕಿ 279.5 ಮಿ.ಮೀ. ಮಳೆ ಸುರಿದು ಶೇ. 65 ಅಧಿಕವಾಗಿದೆ. ಬೇಲೂರಿನಲ್ಲಿ 169.5 ಮಿ.ಮೀ. ವಾಡಿಕೆ ಮಳೆ ಪೈಕಿ 279.5 ಮಿ.ಮೀ. ಮಳೆ ಸುರಿದು ಶೇ. 65 ರಷ್ಟು ಹೆಚ್ಚಾಗಿದೆ. ಚನ್ನರಾಯಪಟ್ಟಣ ತಾಲ್ಲೂಕಿನಾದ್ಯಂತ ವಾಡಿಕೆ ಮಳೆ ಪ್ರಮಾಣ 162.3 ಮಿ.ಮೀ. ಇದ್ದು 263.4 ಮಿ.ಮೀ. ಸುರಿದು ಶೇ. 62 ರಷ್ಟು ಹೆಚ್ಚು ಮಳೆಯಾದ ವರದಿಯಾಗಿದೆ. ಹಾಸನ ತಾಲ್ಲೂಕಿನಲ್ಲಿ 178 ಮಿ.ಮೀ. ಪೈಕಿ 274.8 ಮಿ.ಮೀ. ಮಳೆಯಾಗಿ ಶೇ. 54 ರಷ್ಟು ಹೆಚ್ಚಾಗಿದೆ. ಹೊಳೆನರಸೀಪುರದಲ್ಲಿ ವಾಡಿಕೆ ಮಳೆ 186.1 ಮಿ.ಮೀ. ಇದೆಯಾದರೂ 290.1 ಮಿ.ಮೀ. ಸುರಿದು ಶೇ. 56 ರಷ್ಟು ಹೆಚ್ಚಾಗಿದೆ. ಮಲೆನಾಡು ಪ್ರದೇಶವಾದ ಸಕಲೇಶಪುರದಲ್ಲಿ 217.7 ಮಿ.ಮೀ. ವಾಡಿಕೆ ಪೈಕಿ 768.8 ಮಿ.ಮೀ. ಸುರಿದು ಶೇ. 253 ರಷ್ಟು ಹೆಚ್ಚು ಮಳೆಯಾಗಿ ದಾಖಲೆ ಬರೆದಿದೆ.

2.50 ಲಕ್ಷ ಹೆಕ್ಟೇರ್ ಕೃಷಿ ಭೂಮಿ: ಹಾಸನ ಜಿಲ್ಲೆಯು ಮಲೆನಾಡು, ಅರೆಮಲೆನಾಡು ಹಾಗು ಬಯಲು ಸೀಮೆ ಮೂರು ವಿಭಾಗವಾಗಿ ಪ್ರತ್ಯೇಕಿಸಲ್ಪಟ್ಟಿದ್ದು ಒಟ್ಟು 2.50 ಲಕ್ಷ ಹೆಕ್ಟೇರ್ ಬಿತ್ತನೆ ಪ್ರದೇಶ ಹೊಂದಿದೆ. ಪೂರ್ವ ಮುಂಗಾರಿನಲ್ಲಿ ಅಲಸಂದೆಯನ್ನು ಹೆಚ್ಚಾಗಿ ಬಿತ್ತನೆ ಮಾಡುವುದರಿಂದ ಈ ವರೆಗೆ ಅಂದಾಜು 30 ಸಾವಿರ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. 1.50 ಲಕ್ಷ ಹೆಕ್ಟೇರ್ ಮೆಕ್ಕೆಜೋಳ, 90 ಸಾವಿರ ಹೆಕ್ಟೇರ್ ರಾಗಿ ಹಾಗೂ 40 ಸಾವಿರ ಹೆಕ್ಟೇರ್ ಭತ್ತ ಬಿತ್ತನೆ ಪ್ರದೇಶವನ್ನು ಜಿಲ್ಲೆ ಒಳಗೊಂಡಿದೆ. ಅಲಸಂದೆ, ಹೆಸರು ಮತ್ತಿತರ ದ್ವಿದಳ ಧಾನ್ಯಗಳನ್ನು ಕೆಲವೆಡೆ ಬೆಳೆಯಲಾಗುತ್ತದೆ.

ಮಳೆ ನಿಂತರಷ್ಟೇ ಅನುಕೂಲ: ಪ್ರಸ್ತುತ ಸುರಿಯುತ್ತಿರುವ ಮಳೆ ಈ ವರೆಗೆ ರೈತರಿಗೆ ಅನುಕೂಲವೇ ಆದರೂ ಮುಂದೆಯೂ ಇದೇ ಪರಿಸ್ಥಿತಿ ಮುಂದುವರೆದರೆ ಸಮಸ್ಯೆಯಾಗಲಿದೆ. ಕನಿಷ್ಠ ಒಂದು ವಾರದ ಮಟ್ಟಿಗಾದರೂ ಬಿಸಿಲು ಬರಬೇಕು. ಹೀಗಾದರೆ ಮಾತ್ರ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ.

## ಮಲ್ಲಿಪಟ್ಟಣ ರೈತ ಸಂಪರ್ಕ ಕೇಂದ್ರದಲ್ಲಿ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ಮಲ್ಲಿಪಟ್ಟಣ ರೈತ ಸಂಪರ್ಕ ಕೇಂದ್ರದ ಕಿಟಕಿ ಸರಳು ಮುರಿದು 2 ಲಕ್ಷ ರೂ.ಗೂ ಹೆಚ್ಚಿನ ಮೌಲ್ಯದ ಕೃಷಿ ಪರಿಕರಗಳನ್ನು ಕಳ್ಳರು ಕದ್ದೊಯ್ದಿರುವ ಘಟನೆ ನಡೆದಿದೆ.

ಮಲ್ಲಿಪಟ್ಟಣ ಹೋಬಳಿ ಕೇಂದ್ರದಲ್ಲಿ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, ಹೋಬಳಿ ರೈತರಿಗೆ ಪೂರಕ ಕೃಷಿ ಪರಿಕರಗಳನ್ನು ದಾಸ್ತಾನು ಮಾಡಲಾಗಿತ್ತು. ಮಂಗಳವಾರ ಬೆಳಿಗ್ಗೆ ಕಚೇರಿ ಬಾಗಿಲು ತೆರೆದು ನೋಡಿದ ವೇಳೆ ಕೃಷಿ ಪರಿಕರಗಳು ಚೆಲ್ಲಾಪಿಲ್ಲಿ ಆಗಿರುವುದಲ್ಲದೆ ಕಂಪ್ಯೂಟರ್, ಎಲೆಕ್ಟ್ರಾನಿಕ್ ಮತ್ತು ಸಿಬ್ಬಂದಿ ಬಳಕೆ ಮಾಡುವ ಟೇಬಲ್ ಕುರ್ಚಿಗಳ ಮೇಲೆ ಔಷಧಿಗಳನ್ನು ಎರಚಿರುವುದು ಕಂಡುಬಂದಿದೆ.

ನಂತರ ದಾಸ್ತಾನು ಪರಿಶೀಲನೆ ನಡೆಸುವ ವೇಳೆ



ವರದ ಸಂಸ್ಥೆಯ 3305 ನಂಬರ್‌ನ ಬಿತ್ತನೆ ಮುಸುಕಿನ ಜೋಳದ ಒಟ್ಟು 775 ಕೆ.ಜಿ. ತೂಕದ ಚೀಲ, 50 ಕೆ.ಜಿ. ತೂಕದ ಔಷಧ ಬಾಕ್ಸ್ ಹಾಗೂ 18 ಕೆ.ಜಿ. ತೂಕದ ಸಸ್ಯ ಸಂರಕ್ಷಣಾ ಔಷಧಿಗಳನ್ನು ಕಳವು ಮಾಡಲಾಗಿದೆ. ಅಲ್ಲದೆ ಹಾರೆ ಗುದ್ದಲಿಗಳನ್ನು ಕಿಟಕಿಯ ಹೊರಭಾಗಕ್ಕೆ ಎಸೆದಿದ್ದಾರೆ ಎಂದು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕಿ ಕವಿತಾ ಮಾಹಿತಿ ನೀಡಿದರು.

ಬಿತ್ತನೆ ಬೀಜಗಳಾದ ಭತ್ತ, ಮುಸುಕಿನ ಜೋಳ, ದ್ವಿದಳ ಧಾನ್ಯ, ಹಾರೆ, ಗುದ್ದಲಿ ಹಾಗು ಇತರೆ ಎಲೆಕ್ಟ್ರಾನಿಕ್ ವಸ್ತುಗಳನ್ನು ಕಳವು ಮಾಡಿಲ್ಲ. ಆದರೆ ಅವುಗಳ ಮೇಲೆ ಔಷಧಗಳನ್ನು ಎರಚಿ ಹಾನಿಗೊಳಿಸಿದ್ದಾರೆ. ಪೊಲೀಸರಿಗೆ ದೂರು ನೀಡಿದ ಮೇರೆಗೆ ಸ್ಥಳಕ್ಕೆ ಹಾಜರಾಗಿ ಪರಿಶೀಲನೆ ನಡೆಸಿದ್ದಾರೆ.

ಇದುವರೆಗೂ ತಾಲ್ಲೂಕು ಕೇಂದ್ರ ಸೇರಿ ಹೋಬಳಿಗಳ ರೈತ ಸಂಪರ್ಕ ಕೇಂದ್ರಗಳಲ್ಲಿ ಇಂತಹ ಪ್ರಕರಣ ನಡೆದಿರಲಿಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ರೈತ ಸಂಪರ್ಕ ಕೇಂದ್ರಗಳ ಒಳಗೆ ಮತ್ತು ಹೊರಗೆ ಸಿಸಿ ಕ್ಯಾಮರಾ ಅಳವಡಿಸುವ ಕುರಿತು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು. ಮಲ್ಲಿಪಟ್ಟಣ ರೈತ ಸಂಪರ್ಕ ಕೇಂದ್ರದ ಗಾಜಿನ ಕಿಟಕಿಗಳನ್ನು ಭದ್ರಪಡಿಸುವ ಕೆಲಸ ಸಹ ತ್ವರಿತವಾಗಿ ನಿರ್ವಹಿಸಲಾಗುವುದು ಎಂದು ತಿಳಿಸಿದರು.

## ಅಂಗನವಾಡಿ ಕಟ್ಟಡ ಕಾಮಗಾರಿಗೆ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ಕಾನನಕೊಪ್ಪಲು ಗ್ರಾಮದಲ್ಲಿ ನನೆಗುದಿಗೆ ಬಿದ್ದಿದ್ದ ನೂತನ ಅಂಗನವಾಡಿ ಕಟ್ಟಡ ಕಾಮಗಾರಿಗೆ ಗ್ರಾಮಸ್ಥರ ಸಹಕಾರದೊಂದಿಗೆ ಚಾಲನೆ ನೀಡಲಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ತಿಳಿಸಿದರು.

ಕಾನನಕೊಪ್ಪಲು ಗ್ರಾಮದ ಗ್ರಾಮಠಾಣ ಜಾಗದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ ಮಾಡಲು ಗ್ರಾಮಸ್ಥರು ವಿರೋಧ ಮಾಡಿದ ಹಿನ್ನೆಲೆ ಕೆಲಸ ನನೆಗುದಿಗೆ ಬಿದ್ದಿತ್ತು. ಪೊಲೀಸರ ಸಹಕಾರದೊಂದಿಗೆ ಕಟ್ಟಡ ನಿರ್ಮಾಣ ಜಾಗವನ್ನು ಸ್ವಾಧೀನಕ್ಕೆ ಪಡೆದು ಜೆಸಿಬಿ ಮೂಲಕ ಸ್ವಚ್ಛಗೊಳಿಸಿ ಅಳತೆ ಕೂಡ ಮಾಡಿ ಜಿಪಂ ಎಇಇ, ಜೆಇ, ಸಿಡಿಪಿಒ ಸಮ್ಮುಖದಲ್ಲಿ ಕೆಲಸ ಆರಂಭಿಸಲಾಗಿದೆ. ಗ್ರಾಮಸ್ಥರು




ಕೆಲಸ ನಡೆಯುವ ವೇಳೆ ನಿಂತು ಗುಣಮಟ್ಟದ ಕೆಲಸ ಮಾಡಿಸಿಕೊಂಡು ಪುಟ್ಟಮಕ್ಕಳ ಶೈಕ್ಷಣಿಕ ಬೆಳವಣಿಗೆ ಮತ್ತು ಗರ್ಭಿಣಿ, ಬಾಣಂತಿಯರಿಗೆ ಇಲಾಖೆ ವತಿಯಿಂದ ದೊರೆ ಯುವ ಸೌಕರ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಕಾನನಕೊಪ್ಪಲು ಗ್ರಾಮದಲ್ಲಿ ಅಂಗನವಾಡಿ ಕಟ್ಟಡವಿಲ್ಲದೇ ಕಾರ್ಯಕರ್ತೆಯರ ವಾಸದ ಮನೆಯಲ್ಲಿಯೇ ಕಳೆದ ಆರು ವರ್ಷಗಳಿಂದಲೂ ಕೂಡ ನಡೆಯುತ್ತಿದೆ. 15ಕ್ಕೂ ಹೆಚ್ಚು ಮಕ್ಕಳು ಇದ್ದಾರೆ. 10ಕ್ಕೂ ಹೆಚ್ಚು ಗರ್ಭಿಣಿಯರು, ಬಾಣಂತಿಯರು ಸಹ ಫಲಾನುಭವಿಗಳಾಗಿದ್ದಾರೆ. 2022-23ರಲ್ಲಿಯೇ ನೂತನ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ 23 ಲಕ್ಷ ರೂ. ಮಂಜೂರಾಗಿ ಏಜೆನ್ಸಿ ಕೂಡ ಫಿಕ್ಸ್ ಆಗಿದೆ. ಟೆಂಡರ್ ಪಡೆದಿರುವ ವ್ಯಕ್ತಿಗೆ ಕಾರ್ಯಾದೇಶ ಕೂಡ ನೀಡಲಾಗಿದೆ. ಜಾಗವನ್ನು ಸ್ಥಳೀಯ ಗ್ರಾಪಂ ವತಿಯಿಂದ ಒದಗಿಸಲಾಗಿದೆ.

ಹೀಗಿದ್ದರೂ ಕೂಡ ಕೆಲಸ ಆರಂಭಿಸಲು ಹೋದಾಗ ಗ್ರಾಮದ ಒಂದು ಗುಂಪು ಕೆಲಸ ಮಾಡಿ ಎಂದರೇ ಇನ್ನೊಂದು ಗುಂಪು ಬೇಡ ಎಂದು ತಕರಾರು ತೆಗೆಯುತ್ತಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿ ಇಂದು ಪೊಲೀಸರ ರಕ್ಷಣೆಯೊಂದಿಗೆ ಕಟ್ಟಡದ ಕೆಲಸ ಆರಂಭಿಸಲಾಗಿದೆ. ಯಾವುದೇ ಗ್ರಾಮಸ್ಥರು ಸ್ಥಳಕ್ಕೆ ಹಾಜರಾಗಿ ತೊಂದರೆ ನೀಡಲು ಮುಂದಾಗಿಲ್ಲ. ಇದೇ ನಿಟ್ಟಿನಲ್ಲಿ ಸಹಕಾರ ನೀಡಬೇಕೆಂದು ಸಿಡಿಪಿಒ ಎಂ.ಆರ್.ವೆಂಕಟೇಶ್ ವಿನಂತಿ ಮಾಡಿದರು.

ತಾಲ್ಲೂಕಿನಲ್ಲಿ ಒಟ್ಟು 292 ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಸ್ವಂತ ಕಟ್ಟಡದಲ್ಲಿ 241 ಕಾರ್ಯನಿರ್ವಹಿಸುತ್ತಿದ್ದು, ಬಾಡಿಗೆ ಕಟ್ಟಡದಲ್ಲಿ 19 ಇದ್ದು, ಇತರೆ ಕಟ್ಟಡಗಳಲ್ಲಿ 32 ಕೇಂದ್ರಗಳು ನಡೆಯುತ್ತಿವೆ. ಒಟ್ಟು 20 ಕಟ್ಟಡ ನಿರ್ಮಾಣ ಹಂತದಲ್ಲಿವೆ ಎಂದು ಅವರು ಮಾಹಿತಿ ನೀಡಿದರು.

## ನಟ ಕಮಲ್ ಹಾಸನ್ ವಿರುದ್ಧ ಕರವೇ ಪ್ರತಿಭಟನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಮಿಳಿನಿಂದ ಕನ್ನಡ ಹುಟ್ಟಿತು ಎಂಬ ಉದ್ಧಟತನದ ಹೇಳಿಕೆ ನೀಡಿರುವ ನಟ ಕಮಲ್ ಹಾಸನ್ ಕೂಡಲೇ ಕನ್ನಡಿಗರ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆಯಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಶಾಸ್ತ್ರೀಯ ಸ್ಥಾನಮಾನ ಹೊಂದಿರುವ, ಎಂಟು ಜ್ಞಾನಪೀಠ, ಬೂಕರ್ ಪ್ರಶಸ್ತಿಗೆ ಭಾಜನವಾಗಿರುವ ಕನ್ನಡದ ಕುರಿತು ಹಗುರವಾಗಿ ಮಾತನಾಡುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಉದ್ಧಟತನದ ಹೇಳಿಕೆ ನೀಡಿರುವ ನಟ ಕಮಲ್ ಹಾಸನ್ ಅಭಿನಯದ ಥಗ್ ಲೈಫ್ ಸಿನಿಮಾವನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡಬಾರದು. ಕನ್ನಡದ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದರೂ ಕೂಡ ಸ್ವಾರ್ಥದಿಂದ ರಾಜಕಾರಣಿಗಳು ಮತ್ತು ಚಲನಚಿತ್ರ ನಟರು ಜಾಣಮೌನ ವಹಿಸುವ ಮೂಲಕ ನಾಡದ್ರೋಹ ಎಸಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಕರವೇ ಸ್ವಾಭಿಮಾನಿ ಸೇನೆ ಘಟಕದ ಅಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಅತ್ಯಂತ ಪ್ರಾಚೀನ ಲಿಪಿಯನ್ನು ಹೊಂದಿರುವ ಕನ್ನಡಕ್ಕೆ ಈಗಾಗಲೇ ಶಾಸ್ತ್ರೀಯ ಸ್ಥಾನಮಾನ ಬಂದಿದೆ. ಇದಕ್ಕೆ ಕಾರಣ ಸಾವಿರಾರು ವರ್ಷದ ಗತ ಭಾಷೆ ಎಂಬ ಲಿಖಿತ ಶಾಸನ ಬೇಲೂರು ತಾಲ್ಲೂಕಿನ ಹಲ್ಮಿಡಿ ಗ್ರಾಮದಲ್ಲಿ ಲಭ್ಯವಾಗಿದೆ. ಅಲ್ಲದೆ ಕನ್ನಡ ಭಾಷೆಗೆ ಈಗಾಗಲೇ ಎಂಟು ಜ್ಞಾನಪೀಠ ಪ್ರಶಸ್ತಿ ಮತ್ತು ಇತ್ತೀಚಿಗೆ ಬೂಕರ್ ಪ್ರಶಸ್ತಿ ಕೂಡ ಸಿಕ್ಕಿದೆ. ಆದರೆ ಒಬ್ಬ ತಮಿಳುನಟ ತನ್ನ ಚಿತ್ರವನ್ನು ಅನಾವರಣ ಮಾಡುವ ಸಂದರ್ಭದಲ್ಲಿ ಕನ್ನಡ ಭಾಷೆ ತಮಿಳಿನಲ್ಲಿ ಹುಟ್ಟಿದೆ ಎಂಬ ವಿವಾದಾತ್ಮಕ ಹೇಳಿಕೆಯನ್ನು ನೀಡಿ ಏಳು ಕೋಟಿ ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ತಂದಿದ್ದಾನೆ. ಇಂತಹ ಕಮಲಹಾಸನ್ ತಾನು ನಟಿಸಿದ ಥಗ್ ಲೈಫ್ ಎಂಬ ಚಿತ್ರವನ್ನು ಕನ್ನಡ ನಾಡಿನಲ್ಲಿ ಬಿಡುಗಡೆ ಮಾಡಲು ಹರಸಾಹಸ ಪಡುತ್ತಿದ್ದಾರೆ. ಇಲ್ಲಿನ ಕನ್ನಡ ಪರ ಹೋರಾಟಗಾರ ಭಯದಿಂದ ನ್ಯಾಯಾಲಯದ ಮೆಟ್ಟಿಲು ಏರಿದ್ದಾನೆ. ಯಾವ ಕಾರಣಕ್ಕೂ ಆತನ ನಟನೆಯ ಚಿತ್ರ ಬಿಡುಗಡೆ ಮಾಡಬಾರದು. ಅಲ್ಲದೆ ಕಮಲ್ ಹಾಸನ ಒಟ್ಟು ಚಿತ್ರಗಳನ್ನು ಕನ್ನಡ ನಾಡಿನಲ್ಲಿ ಬಹಿಷ್ಕಾರಿಸಲಾಗಿದೆ. ಇದನ್ನು ಮೀರಿ ನಡೆದುಕೊಂಡರೆ ಅಂತಹ ಚಿತ್ರಮಂದಿರಕ್ಕೆ ಬೆಂಕಿ ಹಚ್ಚಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸೇನೆ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಉಪಾಧ್ಯಕ್ಷ ರುದ್ರೇಶ್, ಗೌರವಾಧ್ಯಕ್ಷ ಧರ್ಮೇಗೌಡ, ಸಂಘಟನಾ ಕಾರ್ಯದರ್ಶಿ ರಂಜಿತಾ, ಕಾರ್ಯದರ್ಶಿ ಸುರೇಶ್, ಸುಬ್ರಹ್ಮಣ್ಯ ಹಾಗೂ ಇತರರಿದ್ದರು.

## ಆಟೋ ನಿಲ್ದಾಣಕ್ಕೆ ಚಾಲನೆ



ಹಾಸನ: ನಗರದ ಹುಣಸಿನಕೆರೆ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಎಪಿಜೆ ಅಬ್ದುಲ್ ಕಲಾಂ ಆಟೋ ನಿಲ್ದಾಣವನ್ನು ಶಾಸಕ ಹೆಚ್.ಪಿ.ಸ್ವರೂಪ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಈ ಭಾಗದ ಆಟೋ ಚಾಲಕರ ಕಳೆದ ಹಲವು ದಿನಗಳ ಬೇಡಿಕೆಯಾಗಿದ್ದ ಆಟೋ ನಿಲ್ದಾಣ ಕನಸು ಇಂದು ನನಸಾಗಿದೆ. ಲಕ್ಷಾಂತರ ರೂ. ಬಂಡವಾಳ ಹಾಕಿ ಆಟೋ ಖರೀದಿಸಿ ಬದುಕು ಕಟ್ಟಿಕೊಂಡಿರುವ ಆಟೋ ಚಾಲಕರು, ಬಿಸಿಲು ಹಾಗೂ ಮಳೆಯಿಂದ ಆಟೋಗಳನ್ನು ರಕ್ಷಣೆ ಮಾಡಿಕೊಳ್ಳುವುದು ಸವಾಲಾಗಿದೆ. ಆದ್ದರಿಂದ ಶಾಸಕರ ಅನುದಾನದಲ್ಲಿ ಸಣ್ಣ ಸಹಾಯಹಸ್ತ ಚಾಚಲಾಗಿದೆ ಎಂದರು.

ಒಂದೆಡೆ ಬಾಡಿಗೆ ಕೊರತೆಯಿಂದ ಬಳಸುತ್ತಿರುವ ಆಟೋ ಚಾಲಕರು ತಮ್ಮ ವಾಹನಗಳನ್ನು ರಕ್ಷಣೆ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸುಸಜ್ಜಿತವಾದ ಆಟೋ ನಿಲ್ದಾಣ ನಿರ್ಮಿಸಲಾಗಿದ್ದು, ಆಟೋ ಚಾಲಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

## ಧರೆಗುರುಳುವ ಹಂತದಲ್ಲಿ ಟಿಸಿ: ಆತಂಕ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಕಟ್ಟೆಸೋಮನ ಹಳ್ಳಿಯಿಂದ ತೀರ್ಥ ಮಲ್ಲಿಕಾರ್ಜುನ ಕಲ್ಯಾಣಿ ಹಾಗೂ ವಿವಿಧ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಬದಿಯಲ್ಲಿ ಟ್ರಾನ್ಸ್‌ಫಾರ್ಮರ್ (ವಿದ್ಯುತ್ ಪರಿವರ್ತಕ) ಬೀಳುವ ಸ್ಥಿತಿಯಲ್ಲಿದೆ. ಅರ್ಧಕ್ಕೆ ವಾಲಿರುವ ಟಿಸಿ ಮಳೆ ಹೊಡೆತಕ್ಕೆ ಯಾವ ಸಂದರ್ಭದಲ್ಲಾದರೂ ಭೂಮಿ ಮುಟ್ಟುವ ಸಾಧ್ಯತೆ ಇದೆ. 25 ಕೆ.ವಿ. ಸಾಮರ್ಥ್ಯದ ಟ್ರಾನ್ಸ್ ಫಾರ್ಮರ್ ತೂಕ ಕಂಬದ ಒಂದು ಮಗ್ಗುಲಿಗೆ ಬಿದ್ದಿದೆ.

ಟಿಸಿ ಹೊತ್ತಿರುವ ಕಂಬದ ಪಕ್ಕದ ರಸ್ತೆಯಲ್ಲಿ ವಿವಿಧ ಗ್ರಾಮಗಳ ಜನರು ನಗರಗಳಿಗೆ ತುರ್ತು ಕೆಲಸಕ್ಕೆ ಓಡಾಡುತ್ತಾರೆ. ಅಲ್ಲದೆ ಕಂಬದ ಪಕ್ಕದಲ್ಲಿಯೇ ದನ ಕರುಗಳು ಓಡಾಡುತ್ತವೆ. ಕಂಬಕ್ಕೆ ಹಾನಿಯಾದರೆ ಟ್ರಾನ್ಸ್‌ಫಾರ್ಮರ್‌ನಿಂದ 4 ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯಾಗುತ್ತದೆ. ಕಂಬಕ್ಕೆ ಹಾನಿಯಾದರೆ ಕೃಷಿ ಚಟುವಟಿಗೆ ಹಿನ್ನಡೆ ಆಗಲಿದೆ.

ಸೆಸ್ಕ್ ಎಂಜಿನೀಯರ್‌ಗಳು ತಕ್ಷಣ ಗಮನ ಹರಿಸಿ ಕಂಬವನ್ನು ಬಂದೋಬಸ್ತ್ ಆಗಿ ನಿಲ್ಲಿಸಬೇಕು ಎಂದು ರೈತ ಶಾಂತಮಲ್ಲಪ್ಪ ವಿನಂತಿಸಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಜೂನ್-5

**1984:** ಈ ದಿನ ಭಾರತೀಯ ಸೇನೆ ಅಮೃತಸರದ ಸ್ವರ್ಣ ಮಂದಿರದಲ್ಲಿ ತಲೆಮರೆಸಿಕೊಂಡಿದ್ದ ಭಿಂದ್ರಾಂವಾಲೆ ಮತ್ತು ಅಲೋಪಂತಿಗಳು ವಿರುದ್ಧ ಆಪರೇಷನ್ ಬ್ಲೂ ಸ್ಟಾರ್ ನಡೆಸಿತು. ಇದು ಭಾರತದ ರಾಜಕೀಯ ಹಾಗೂ ಧರ್ಮೀಯ ಇತಿಹಾಸದಲ್ಲಿ ಬಹುಮಹತ್ವದ ಘಟನೆ.

**ಜೂನ್ 5:** ಈ ದಿನ ವಿಶ್ವದಾದ್ಯಂತ ಪರಿಸರ ಸಂರಕ್ಷಣೆಗೆ ಅರ್ಪಿತವಾಗಿದೆ. ಭಾರತದಲ್ಲೂ ವಿವಿಧ ಕಾರ್ಯಕ್ರಮಗಳ ಮೂಲಕ ಪರಿಸರ ಜಾಗೃತಿ ಹರಡುವ ಕಾರ್ಯ ನಡೆಯುತ್ತದೆ.

**ಜನನ**

**1972:** ಉತ್ತರ ಪ್ರದೇಶದ ಮುಖ್ಯಮಂತ್ರಿ ಮತ್ತು ಹಿಂದು ಧಾರ್ಮಿಕ ಗುರು ಯೋಗಿ ಆದಿತ್ಯನಾಥ್.

**1909:** ಗೌರಿಹರಿಹರನಾಥ್ ಖಂಡೇಕರ್, ಕನ್ನಡ/ಮರಾಠಿ ಸಾಹಿತ್ಯದ ಪ್ರಸಿದ್ಧ ಸಾಹಿತಿ. ಆಕಾಶವಾಣಿಯಲ್ಲಿ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದರು.

**ಮರಣ**

**1973:** ಎಂ.ಎಸ್. ಗೋಲ್ವಾಲ್ಕರ್, ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಎರಡನೇ ಸರಸಂಘಚಾಲಕ. ಸಂಘದ ಚಟುವಟಿಕೆಗಳ ವಿಸ್ತಾರದಲ್ಲಿ ಮಹತ್ವಪೂರ್ಣ ಪಾತ್ರವಹಿಸಿದರು.

**1656:** ಅದಿಲ್ ಷಾ, ಬಿಜಾಪುರದ ಆದಿಲ್ ಷಾಹಿ ವಂಶದ ಶಕ್ತಿಶಾಲಿ ಮುದಿರುಜ. ಇವರು ಬಿಜಾಪುರ ಸಾಮ್ರಾಜ್ಯವನ್ನು ಸ್ಥಿರಗೊಳಿಸಿದ ರಾಜ.

## ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಪ್ರಪಂಚದಾದ್ಯಂತ ಜೂನ್ 5ರಂದು ಆಚರಿಸಲಾಗುವ ವಿಶ್ವ ಪರಿಸರ ದಿನವು ಪ್ರತಿ ವರ್ಷದಂತೆಯೇ ಈ ಬಾರಿ ಕೂಡ ಪರಿಸರ ಸಂರಕ್ಷಣೆಯ ಬಗ್ಗೆ ಜನಜಾಗೃತಿಯನ್ನು ಹೆಚ್ಚಿಸಲು ವಿವಿಧ ಕಾರ್ಯಕ್ರಮಗಳ ಮೂಲಕ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಯುನೈಟೆಡ್ ನೇಷನ್ಸ್ 1973ರಿಂದ ಪರಿಸರ ದಿನ ಆರಂಭಿಸಿತು. ನಶಿಸುತ್ತಿರುವ ಪ್ರಕೃತಿಯ ಪುನಶ್ಚೇತನ ಭೂಮಿಯ ಪುನರುಜ್ಜೀವನ 2025ರ ಘೋಷವಾಕ್ಯವಾಗಿದೆ. ಈ ಥೀಮ್ ಅನೇಕ ಸಮಸ್ಯೆಗಳ ಕುರಿತಂತೆ ಗಮನ ಸೆಳೆಯುತ್ತಿದ್ದು, ಅರಣ್ಯ ನಾಶ, ಮಣ್ಣು ಸಂರಕ್ಷಣೆ, ನೀರು ರಕ್ಷಣೆ, ಪ್ಲಾಸ್ಟಿಕ್ ಬಳಕೆ ಇತ್ಯಾದಿಗಳ ಕುರಿತು ಚಿಂತನೆಗೆ ಆಹ್ವಾನ ನೀಡುತ್ತಿದೆ.

**ಇಂದು ಪರಿಸರ ದಿನ**




### ಪರಿಸರ ಉಸಿರಾಟದ ಮೂಲ

ಪರಿಸರ ಎಂದರೆ ಕೇವಲ ಗಿಡಗಂಟಿಗಳ ಪಂಗಡವಲ್ಲ. ಅದು ಮನುಷ್ಯನ ಜೀವನದ ಮೂಲಾಧಾರ. ಆಮ್ಲಜನಕದಿಂದ ಹಿಡಿದು ನೀರಿನವರೆಗೆ, ಆಹಾರದಿಂದ ಹಿಡಿದು ಋತುಚಕ್ರದ ತನಕ ಎಲ್ಲವೂ ಪರಿಸರದ ಕೊಡುಗೆ. ಆದರೆ ಇಂದು ಪರಿಸರವನ್ನು ಮಾನವನ ಕ್ರೂರ ಬಳಕೆ, ಕಲ್ಲಿದ್ದಲು ಮತ್ತು ಇಂಧನ ಶೋಷಣೆ, ಪ್ಲಾಸ್ಟಿಕ್ ಗೂಡ್ಸ್ ಬಳಕೆ, ನದಿ ಮತ್ತು ಜಲಾಶಯ ಮಾಲಿನ್ಯದಿಂದಾಗಿ ಭಾರೀ ನಷ್ಟ ಎದುರಿಸುತ್ತಿದೆ.

### ಶಾಲೆಗಳಿಂದ ಕಾರ್ಯಾಲಯದವರೆಗೆ

ರಾಜ್ಯದಾದ್ಯಂತ ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಪರಿಸರ ದಿನದ ಅಂಗವಾಗಿ ರ್‍ಯಾಲಿ, ನಿರ್ವಹಣಾ ಶಿಬಿರ, ವಿಚಾರ ಸಂಕಿರಣ ನಡೆಯುತ್ತಿವೆ. ಮಕ್ಕಳು ಪ್ಲೇಕಾರ್ಡ್ ಹಿಡಿದು ಪರಿಸರದ ಪರ ಧ್ವನಿ ಎತ್ತುತ್ತಿದ್ದಾರೆ. ಸ್ಥಳೀಯ ಆಡಳಿತಗಳು ನದಿ ಸ್ವಚ್ಛತಾ ಅಭಿಯಾನ, ಪ್ಲಾಸ್ಟಿಕ್ ನಿಷೇಧ ಅಭಿಯಾನಗಳಿಗೆ ಮೆರಗು ನೀಡುತ್ತಿದೆ.

ವಿಶ್ವ ಪರಿಸರ ದಿನವು ಕೇವಲ ಒಂದು ದಿನದ ಆಚರಣೆಗಷ್ಟೇ ಸೀಮಿತವಾಗದೆ, ನಮ್ಮ ದಿನನಿತ್ಯದ ಬದುಕಿನಲ್ಲಿ ಆ ಚಿಂತನೆ ಜೀವಂತವಾಗಬೇಕು ಎಂಬುದೇ ಇಂದು ದೊರೆಯುವ ಸಂದೇಶ. ಮುಂದಿನ ಪೀಳಿಗೆಗೆ ನೈಸರ್ಗಿಕ ಸಂಪತ್ತುಗಳನ್ನು ಉಳಿಸಿ ನೀಡುವುದು ನಮ್ಮ ಕರ್ತವ್ಯ.

### ಪರಿಸರ ಉಳಿಸೋಣ ಭವಿಷ್ಯ ಕಟ್ಟೋಣ

ಪ್ರತಿಯೊಬ್ಬರೂ ತಮ್ಮ ಜೀವನ ಶೈಲಿಯಲ್ಲಿ ಸಣ್ಣ ಬದಲಾವಣೆಗಳನ್ನು ತಂದರೆ ಪರಿಸರದ ಮೇಲೆ ದೊಡ್ಡ ಪ್ರಭಾವ ಬೀರುತ್ತದೆ.

ಉದಾಹರಣೆಗೆ: ಮರುಬಳಕೆಯ ವಸ್ತುಗಳನ್ನು ಬಳಸುವುದು, ವೃಕ್ಷಾರೋಪಣ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಸಾರ್ವಜನಿಕ ಸಾರಿಗೆ ಉಪಯೋಗಿಸುವುದು, ವಿದ್ಯುತ್ ಮತ್ತು ನೀರಿನ ಬಳಕೆಯಲ್ಲಿ ಜಾಗೃತಿ ಇವು ಸಣ್ಣ ಹೆಜ್ಜೆಗಳು ಆದರೆ ಭವಿಷ್ಯ ರಕ್ಷಿಸಲು ಬಲಿಷ್ಠ ಮಾರ್ಗಗಳು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248